ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರಃ 973/2015

ಚಾಸಾಃ 3 ಪ್ರಾಸಾಃ 3

ದಿನಾಂಕಃ 03-09-2019

| | | |
|---|---|---|
| ವಾಗ್ಮೂಲದವರ ಹೆಸರು | ಃ | ವಿಶ್ವನಾಥ ಕಾಂಚನ್ |
| ತಂದೆಯ ಹೆಸರು | ಃ | ಆನಂದ ಪುತ್ರನ್ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಆಟೋ ಚಾಲಕ |
| ವಾಸ ಸ್ಥಳ | ಃ | ಮಣೂರು ಪಡುಕೆರೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ

ಚಾಸಾ-1 ನನ್ನ ತಂದೆ. ದಿಃ 12-09-2014 ರಂದು ರಾತ್ರಿ 9-45 ರ ಸಮಯಕ್ಕೆ ತೆಕ್ಕಟ್ಟೆಯ ಕೊಮೆ ತಿರುವಿನ ಬಳಿ ನನ್ನ ತಂದೆ ಟಿ.ವಿ.ಎಸ್. ಮೋಟಾರ್ ಸೈಕಲ್ ನಲ್ಲಿ ತೆಕ್ಕಟ್ಟೆಯಿಂದ ಕೊಮೆ ರಸ್ತೆಯಿಂದ ಮನೆಗೆ ಬರುತ್ತಿರುವ ಸಂದರ್ಭದಲ್ಲಿ ಇಬ್ಬರು ವ್ಯಕ್ತಿಗಳು ನನ್ನ ತಂದೆಗೆ ನಿಲ್ಲಲು ಸೂಚಿಸಿ ನನ್ನ ತಂದೆ ಮೋಟಾರ್ ಸೈಕಲ್ ಅನ್ನು ನಿಲ್ಲಿಸಿದ ನಂತರ ಆರೋಪಿಗಳು ತಂದೆಯನ್ನು ಬೀಳಿಸಿ ಅವರ ಎದೆಯನ್ನು ಮೆಟ್ಟಿ ನಿಂತು ನಂತರ ಅವರ ಕುತ್ತಿಗೆಯಲ್ಲಿ ಧರಿಸಿದ್ದಂತಹಾ ಒಂದೂವರೆ ಗ್ರಾಂ ತೂಕದ ರೂ.30,000/- ಮೌಲ್ಯದ ಚಿನ್ನದ ಚೈನ್ ಅನ್ನು ಎಳೆದು ಕಿತ್ತುಕೊಂಡು ಓಡಿ ಹೋಗಿರುತ್ತಾರೆ. ಆ ಸಮಯದಲ್ಲಿ ನಾನು ಮನೆಯಲ್ಲಿದ್ದೆ, ನಂತರ ನನ್ನ ತಂದೆ ಬಂದು ಸದರಿ ವಿಚಾರವನ್ನು ನಮಗೆ ತಿಳಿಸಿರುತ್ತಾರೆ.

ನನ್ನ ತಂದೆಗೆ ಆರೋಪಿಗಳು ಕುತ್ತಿಗೆಯಲ್ಲಿಂತಹಾ ಚೈನ್ ಅನ್ನು ಎಳೆದಂತಹಾ ಸಂದರ್ಭದಲ್ಲಿ ಸದರಿ ಚೈನ್ ತಾಗಿ ಕುತ್ತಿಗೆಯ ಬಳಿ ತರಚಿದ ಗಾಯ ಆಗಿದ್ದು ಹಾಗೂ ಮೊಣ ಕಾಲಿನ ಬಳಿ ಗಾಯ ಉಂಟಾಗಿರುತ್ತದೆ. ಈ ಬಗ್ಗೆ ನಾನು ತೆಕ್ಕಟ್ಟೆಯ ಪ್ರೇಮ ಕ್ಲಿನಿಕ್ ಗೆ ಹೋಗಿ ನನ್ನ ತಂದೆಗೆ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ. ಘಟನೆ ನಡೆದ ಮರುದಿನ ಈ ಬಗ್ಗೆ ಚರ್ಚೆ ಮಾಡಿ ಕೋಟಾ ಪೋಲಿಸ್ ಠಾಣೆಗೆ ಹೋಗಿ ನನ್ನ ತಂದೆಯ ಕಡೆಯಿಂದ ದೂರನ್ನು ದಾಖಲಿಸ ಲಾಗಿರುತ್ತದೆ.

ನಂತರ ನಾವು ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬರುವಾಗ ರಾತ್ರಿ 11-00 ಗಂಟೆ ಸಮಯದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರಾದ 2 ಮತ್ತು 3 ನೇ ಆರೋಪಿತರು ಕೆಂಪು ಬಣ್ಣದ ಅಪ್ಪಾಚಿ ಮೋಟಾರ್ ಸೈಕಲ್ ನಲ್ಲಿ ತೆಕ್ಕಟ್ಟೆಯಿಂದ ಕೊಮೆ ಕಡೆಗೆ ಬರುತ್ತಿದ್ದು ಆ ಸಮಯದಲ್ಲಿ ನಮಗೆ ಸದರಿ ವ್ಯಕ್ತಿಗಳ ಮೇಲೆ ಸಂಶಯವಿದ್ದು ಸದರಿ

ವ್ಯಕ್ತಿಗಳ ವಿರುದ್ದ ದೂರನ್ನು ದಾಖಲಿಸಿರುತ್ತೇವೆ. ಮಾರನೆಯ ದಿನ ಪೋಲಿಸರು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ ನನ್ನ ಮತ್ತು ನನ್ನ ತಂದೆಯ ಸಮಕ್ಷಮದಲ್ಲಿ ಪೋಲಿಸರು ಮಹಜರನ್ನು ತಯಾರು ಮಾಡಿರುತ್ತಾರೆ. ನಂತರ ಪೋಲಿಸರು ತನಿಖೆ ಮಾಡಿ ಆರೋಪಿತರನ್ನು ವಿಚಾರಣೆ ಮಾಡಿರುತ್ತಾರೆ. ದೂರು ನೀಡಿದ ಎರಡು ದಿನಗಳ ನಂತರ ಪೋಲಿಸರು ಆರೋಪಿತರನ್ನು ಬಂಧಿಸಿದ ನಂತರ ನಮ್ಮನ್ನು ಠಾಣೆಗೆ ಕರೆಯಿಸಿ ಸದರಿ ಆರೋಪಿತರನ್ನು ನಮಗೆ ತೋರಿಸಿರುತ್ತಾರೆ. ಹಾಗೂ ಆ ಸಮಯದಲ್ಲಿ ಮೂರು ಜನ ವ್ಯಕ್ತಿಗಳು ಠಾಣೆಯಲ್ಲಿ ಹಾಜರಿದ್ದು ಸದರಿ ವ್ಯಕ್ತಿಗಳು ನಿಮ್ಮ ಚೈನ್ ಅನ್ನು ಕದ್ದಿರುತ್ತಾರೆ ಎಂದು ಪೋಲಿಸರು ನಮಗೆ ತಿಳಿಸಿರುತ್ತಾರೆ. ಸದರಿ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ಸುಲಿಗೆ ಮಾಡಿದ ನನ್ನ ತಂದೆಯ ಚೈನ್ ಅನ್ನು ಬ್ಯಾಂಕ್ ನಲ್ಲಿ ರೂ.10,000/- ಗಳಿಗೆ ಅಡಮಾನ ಇರಿಸಿದ್ದು ಆ ಬಗ್ಗೆ ನನಗೆ ತಿಳಿದಿರುತ್ತದೆ. ಸದರಿ ಚಿನ್ನದ ಚೈನ್ ಅನ್ನು ವಿಚಾರಣೆ ವೇಳೆ ನಾನು ನೋಡಿರುವುದಿಲ್ಲ. ಆರೋಪಿತರು ಸುಲಿಗೆ ಮಾಡಿದ ನನ್ನ ತಂದೆಯ ಚೈನ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಚೈನ್ ಅನ್ನು ಮುದ್ದೆಮಾಲು-1 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸದರಿ ಚೈನಿನ ಛಾಯಾ ಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ಕುರಿತಾಗಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ನನ್ನ ಬಳಿ ಯಾವುದೇ ಮರು ಹೇಳಿಕೆಯನ್ನು ಪಡೆದು ಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಹ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದ</u>

ದಿನಾಂಕಃ 04-10-2014 ರಂದು ನಾನು ಕೋಟಾ ಪೋಲಿಸ್ ಠಾಣೆಗೆ ಹೋದಾಗ ನನ್ನ ತಂದೆಯ ಚೈನ್ ಅನ್ನು ಸುಲಿಗೆ ಮಾಡಿದ ಆರೋಪಿತರನ್ನು ಹಾಗೂ ಸ್ವಾದೀನ ಪಡಿಸಿದ ಮೋಟಾರ್ ಸೈಕಲನ್ನು ನಾನು ಠಾಣೆಯಲ್ಲಿ ನೋಡಿದೆ ಎಂದರೆ ಸರಿಯಲ್ಲ. ಅದೇ ಮೋಟಾರ್ ಸೈಕಲ್ ನಲ್ಲಿ ಬಂದು ಅವರು ಸದರಿ ಸುಲಿಗೆಯನ್ನು ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆ ಸಮಯದಲ್ಲಿ ನಾನು ನೋಡಿರುವುದಿಲ್ಲ ನಂತರ ನೋಡಿರುತ್ತೇನೆ ಎಂದು ತಿಳಿಸಿರುತ್ತಾರೆ. ಹಾಗೂ ಸದರಿ ಚೈನ್ ಅನ್ನು ಎಳೆದ ವ್ಯಕ್ತಿಗಳು ನಮ್ಮ ನೆರೆಮನೆಯವರು

ಹಾಗೂ 1ನೇ ಆರೋಪಿ ಪ್ರಶಾಂತ್ ಎಂಬುವವರು ನನಗೆ ತಿಳಿದಿರುತ್ತದೆ ಎಂದರೆ ನನಗೆ ಸಂಶಯವಿತ್ತು ಹಾಗೂ ಆ ಬಗ್ಗೆ ನನ್ನ ಮರು ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ನನಗೆ ನೆನಪಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಮರು ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ.ಆರ್.ಎನ್. ವಕೀಲರಿಂದಃ**

ಸದರಿ ಪ್ರಕರಣದ ಘಟನೆಯ ಎಲ್ಲಾ ವಿಚಾರವನ್ನು ನನ್ನ ತಂದೆ ನಮಗೆ ಹೇಳಿದಾಗ ಗೊತ್ತಾಗಿರುತ್ತದೆ. ಸದರಿ ವಿಚಾರವನ್ನು ನನ್ನ ತಂದೆ ರಾತ್ರಿ 10-15 ಗಂಟೆಗೆ ತಿಳಿಸಿರುತ್ತಾರೆ. ನನ್ನ ತಂದೆಯು ಗಲಾಟೆಯಾದ ಮಾರನೆಯ ದಿನ ಕೊಟ್ಟಂತಹಾ ದೂರು ದಾಖಲೆ ನಿಪಿ-1 ಅನ್ನು ಪೋಲಿಸರು ಬರೆದಿರುತ್ತಾರೆ. ಸದರಿ ದಾಖಲೆಯನ್ನು ನಾವು ಹೇಳಿದಂತೆ ಪೋಲಿಸರು ಬರೆದು ಕೊಂಡಿರುತ್ತಾರೆ. ನಾನು ನನ್ನ ಮ್ಯುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ 2 ಮತ್ತು 3 ನೇ ಆರೋಪಿಗಳ ಮೇಲೆ ನನಗೆ ಸಂಶಯವಿರುವ ಬಗ್ಗೆ ನಾನು ಪೋಲಿಸರ ಬಳಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಹಾಗೂ ಆ ಬಗ್ಗೆ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಕೃತ್ಯದಲ್ಲಿ ಮೂರು ಜನ ವ್ಯಕ್ತಿಗಳು ಭಾಗಿಯಾಗಿರುವ ಬಗ್ಗೆ ನಾನಗಾಲೀ ಚಾಸಾ1 ಮತ್ತು 2 ರವರು ಎಲ್ಲಿಯೂ ಕೂಡ ಹೇಳಿಲ್ಲ. ಸದರಿ ಆರೋಪಿಗಳ ಬಗ್ಗೆ ನಮಗೆ ಪೋಲಿಸರು ಹೇಳಿದಾಗ ಮಾತ್ರ ಗೊತ್ತಾಗಿರುತ್ತದೆ. ನನ್ನ ಮತ್ತು ನನ್ನ ತಂದೆ ಹಾಗೂ ನನ್ನ ಅಣ್ಣ ಇವರನ್ನು ಪೋಲಿಸರು ಠಾಣೆಗೆ ಕರೆಸಿ ಚಿನ್ನದ ಚೈನ್ ಅನ್ನು ತೋರಿಸಿರುತ್ತಾರೆ. ನನ್ನ ಸಮಕ್ಷಮದಲ್ಲಿ ಸದರಿ ಚೈನಿನ ತೂಕವನ್ನು ಪರೀಕ್ಷಿಸಿರುವುದಿಲ್ಲ. ಸದರಿ ಚೈನ್ ಒಂದೂವರೆ ಗ್ರಾಂ ಇದೆ ಎಂದು ನನ್ನ ತಂದೆ ಹೇಳಿರುತ್ತಾರೆ. ಆ ಸಂದರ್ಭದಲ್ಲಿ ಚೈನಿನ ಬಗ್ಗೆ ಪೋಲಿಸರು ನನ್ನ ತಂದೆಯ ಬಳಿ ಯಾವುದೇ ದಾಖಲೆಯನ್ನು ಕೇಳಿರುವುದಿಲ್ಲ.

ಸದರಿ ಚೈನ್ ಅನ್ನು ನಾವು ನೋಡುವಾಗ ಚೈನಿನ ಒಂದು ಕೊಕ್ಕೆ ತುಂಡಾಗಿತ್ತು. ಆ ದಿನದಂದು ನಾನು ಠಾಣೆಯಲ್ಲಿ ನೋಡಿದ ಚೈನ್ ಅನ್ನು ನಂತರ ನೋಡಿರುವುದಿಲ್ಲ. ನಾನು ಛಾಯಾ ಚಿತ್ರದಲ್ಲಿ ನೋಡಿದ ಚೈನ್ ನ ಕೊಕ್ಕೆಯು ತುಂಡಾಗಿರುತ್ತದೆ. ಅದರ ಕೊಕ್ಕೆ ಸಿಕ್ಕಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಚೈನ್ ಅನ್ನು ಪ್ರಶಾಂತ್ ಎಂಬವರು ಅಡಮಾನ ಇಟ್ಟಿರುವ ಬಗ್ಗೆ ಪೋಲಿಸರು ನನ್ನ ಬಳಿ ಹೇಳಿರುತ್ತಾರೆ ಹಾಗೂ ಸದರಿ ಚೈನ್‌ಅನ್ನು ಅಡಮಾನದಿಂದ ಬಿಡುಗಡೆ ಗೊಳಿಸಲು ಯಾರು ಹಣ ನೀಡಿದರು ಎಂದು ನನಗೆ ಗೊತ್ತಿಲ್ಲ. ಸದರಿ ಚೈನ್ ನ ಬೆಲೆಯು ರೂ.30000/- ಇದೆ ಎಂದು ನನ್ನ ತಂದೆ ನನ್ನ ಬಳಿ ಹೇಳಿರುತ್ತಾರೆ. ಹಾಗೂ ಆ ಬಗ್ಗೆ ನಾವು ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ. ಸದರಿ ಘಟನೆ ನಡೆದ ನಂತರ ನಾನು ಯಾವತ್ತೂ

ಠಾಣೆಗೆ ಹೋಗಿರುವುದಿಲ್ಲ. ಹಾಗೂ ನಾನು ಯಾವುದೇ ದಾಖಲೆಗಳಿಗೆ ಠಾಣೆಯಲ್ಲಿ ಸಹಿ ಮಾಡಿರುವುದಿಲ್ಲ.

ವೈದ್ಯಕೀಯ ಚಿಕಿತ್ಸೆಗೆ ನಾನು ಪ್ರೇಮ ಕ್ಲಿನಿಕ್ ಗೆ ಹೋದಾಗ ರಾತ್ರಿ 11-00 ರಿಂದ 11-30 ಗಂಟೆಯಾಗಿತ್ತು. ಸದರಿ ಆಸ್ಪತ್ರೆಯು ಸಣ್ಣ ಕ್ಲಿನಿಕ್ ಆಗಿರುತ್ತದೆ. ನಮ್ಮ ಮೂರೂ ಜನರ ಬಳಿ ಮೊಬೈಲ್ ಇರುತ್ತದೆ ಎಂದರೆ ಸರಿ. ಕೋಟಾ ಪೋಲಿಸ್ ಠಾಣೆ ನಮ್ಮ ಮನೆಯಿಂದ 3 ಕಿ ಮೀ ಅಂತರದಲ್ಲಿರುತ್ತದೆ. ಘಟನೆ ನಡೆದ ನಂತರ ಹಾಗೂ ಚಿಕಿತ್ಸೆ ಪಡೆದುಕೊಂಡು ಬಂದ ನಂತರ ನಮಗೆ ಠಾಣೆಗೆ ಹೋಗಿ ದೂರು ನೀಡಲು ಯಾವುದೇ ಸಮಸ್ಯೆ ಇರಲಿಲ್ಲ. ಹಾಗೂ ಸದರಿ ಸುಲಿಗೆ ಬಗ್ಗೆ ನಾನು ವೈದ್ಯರ ಬಳಿ ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ಪೋಲಿಸರು ನನ್ನ ತಂದೆ ನೀಡಿದ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ, ನನ್ನ ಹೇಳಿಕೆಯನ್ನು ಬರೆದುಕೊಂಡಿರುವುದಿಲ್ಲ. ನನಗೆ ಈ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ ಈ ದಿನ ನ್ಯಾಯಾಲಯದ ಮುಂದೆ ಪೋಲಸಿರು ಹೇಳಿಕೊಟ್ಟಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ನಾನು ಹೇಳಿದಂತೆ ನನ್ನ ತಂದೆಯ ಬಳಿ ಯಾವುದೇ ಚೈನ್ ಇರಲಿಲ್ಲ ಎಂದರೆ ಸರಿಯಲ್ಲ ಹಾಗೂ ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಕೃತ್ಯ ನಡೆದ ಮೊದಲಿನಿಂದಲೂ ಗೊತ್ತಿರುವ ಕಾರಣ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಹಾಗೂ ಆರೂಪಿಗಳಿಗೂ ಸದರಿ ಕೃತ್ಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ